**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ನ್ಯಾಯಾಲಯ, ಕನಕಪುರ .**

ಸಿಸಿಃ **453/2008**

ಸಿಡಬ್ಲೂಃ **1**

ಪಿಡಬ್ಲ್ಯೂ ಃ**1**

ಹೆಸರು : ಮೊಹಮ್ಮದ್ ಮನ್ಸೂರ್

ತಂದೆ ಹೆಸರು : ಅಬ್ದುಲ್ ಅಜೀರ್

ವಯಸ್ಸು : **45** ವರ್ಷ

ಉದ್ಯೋಗ : ವಲಯ ಅರಣ್ಯಾಧಿಕಾರಿ, ರಾಮನಗರ ವಲಯ

ವಾಸ : ರಾಮನಗರ

ದಿನಾಂಕಃ**- 10.07.2025** ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ದಂಡ ಪ್ರಕ್ರಿಯಾ ಸಂಹಿತೆ 299 ರಡಿಯಲ್ಲಿ ಮುಖ್ಯ ವಿಚಾರಣೆ ಎಪಿಪಿ ಅವರಿಂದ</u>**

**ನಾನು ಜೂಲೈ 2006 ರಿಂದ ಆಗಸ್ಟ್-2010 ರವರೆಗೂ ವನವಾಲಕನಾಗಿ ಸಾತನೂರು ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.**

ನಾನು ಸದರಿ ಪ್ರಕರಣದ ಆರೋಪಿಯನ್ನು ನೋಡಿರುವುದಿಲ್ಲ. ಚಾಸಾ**-2** ರಿಂದ **14** ಇವರು ಗೊತ್ತಿರುತ್ತಾರೆ. ದಿನಾಂಕ **10.10.2006** ರಂದು ನಮ್ಮ ವಲಯದ ಸಿಬ್ಬಂದಿಯೊಂದಿಗೆ ಮರಳೇಬೇಕುಪ್ಪೆ ಸರ್ವೆ ನಂ**.572** ರಲ್ಲಿ ಯುನೈಡೆಟ್ ಎಕ್ಸಪೋಟ್ ಪ್ರೈವೆಡ್ ಲಿಮಿಡೆಟ್ ಇವರು ಅಚ್ಚಲು ಮೀಸಲು ಅರಣ್ಯದ **100** ಮೀಟರ್ ವ್ಯಾಪ್ತಿಯಲ್ಲಿ ಅಕ್ರಮ ಗಣಿಗಾರಿಕೆ ಮಾಡುತ್ತಿರುವುದಾಗಿ ಚಾಸಾ**-14** ರವರ ಕಮಿಟಿ ವರದಿ ನೀಡಿದ್ದು ಆ ಆಧಾರದ ಮೇರೆಗೆ ನಾನು ಚಾಸಾ**-2 , 4** ಮತ್ತು **5** ರವರ ಜೊತೆ ಸ್ಥಳ ಪಂಚನಾಮೆಯನ್ನು ತಯಾರು ಮಾಡಿರುತ್ತೇನೆ. ಸದರಿ

ರವರು **1** ಎಕರೆ **35** ಗುಂಟೆ ಪ್ರದೇಶದ **100** ಮೀಟರ್ ವ್ಯಾಪ್ತಿಯಲ್ಲಿ ಅತಿಕ್ರಮ ಮಾಡಿ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವುದಾಗಿ ಕಂಡು ಬಂದಿರುತ್ತದೆ. ಸದರಿ ಸ್ಥಳದಲ್ಲಿ ಗ್ರಾನೈಟ್ ಬ್ಲಾಕುಗಳು ಕಂಡು ಬಂದಿರುವುದಿಲ್ಲ. ಆದರೆ ಈ ಹಿಂದೆ ಗಣಿಗಾರಿಕೆ ಮಾಡಲು ಉಪಯೋಗಿಸಿರುವ ಸ್ಫೋಟಕಗಳು ಹಾಗೂ ಕಲ್ಲಿನ ಚೂರುಗಳು ಕಂಡು ಬಂದಿರುತ್ತವೆ. ಸದರಿ ಮಹಜರ್ ನ್ನು ದಿನಾಂಕ **10.10.2006** ರಂದು ಬೆಳಿಗ್ಗೆ **10.30** ರಿಂದ **11.15** ಗಂಟೆಯವರೆಗೂ ತಯಾರು ಮಾಡಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ಪ್ರಥಮ ಮಾಹಿತಿ ವರದಿಯನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗ ನಿ.ಪಿ.**1** ಎಂದು ಗುರುತಿಸಲಾಗಿ, ಸಾಕ್ಷಿಯ ಸಹಿಯನ್ನು ನಿ.ಪಿ.**1**(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗ ನಿ.ಪಿ.**2** ಎಂದು ಗುರುತಿಸಲಾಗಿ, ಸಾಕ್ಷಿಯ ಸಹಿಯನ್ನು ನಿ.ಪಿ.**2**(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ,

ಕನಕಪುರ .